ಪ್ರಜ್ಞಾ ಮತ್ತಿಹಳ್ಳಿ ಲೇಖಕಿ, ಯಕ್ಷಗಾನ ಕಲಾವಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿಯವರಾದ ಪ್ರಜ್ಞಾ ಅವರ ಪ್ರಕಟಿತ ಕೃತಿಗಳು – 'ಹುಡುಗಿ ನಕ್ಕಾಗ', 'ದೊನ್ನೆ ದೀಪದ ಸಾಲು', 'ಕಾಲನ ಕಾಲಂದುಗೆ' (ಕವನ ಸಂಕಲನಗಳು), 'ದೇವರ ಸ್ವಂತ ನಾಡಿನಲ್ಲಿ' (ಪ್ರವಾಸ ಕಥನ), 'ಮಿನುಗೆಲೆ ನಕ್ಷತ್ರ' (ಹಾಸ್ಯ ಪ್ರಬಂಧಗಳು), 'ಗಂಧಗಾಳಿ' (ಅಂಕಣ ಬರಹಗಳು).

ತೆರೆ ಓರ್ ಲಿಯೆ ಜಾಯ್' ಎಂದು ಆರಂಭವಾಗುವ ಹಾಡು ಪ್ರೇಮಿಯೊಬ್ಬನ ಸಂಜೆಯ ತವಕಗಳನ್ನು ಬಿಡಿಸಿಡುತ್ತದೆ. ಇತ್ತೀಚಿನ ಇನ್ನೊಂದು ಗೀತೆ, 'ಸೂರಜ್ ಹುವಾ ಮದ್ದಂ ಚಾಂದ ಜಲನೆ ಲಗಾ ಆಸಮಾ ಯೆ ಹಾಯ್ ಕ್ಯೊಂ ಫಿಗಲನೆ ಲಗಾ ಮೈ ಟೆಹರಾ ರಹಾ ಜಮೀ ಚಲನೆ ಲಗೀ ಧಡಕಾ ಯೆ ದಿಲ್ ಸಾಂಸ್ ಧಮನೆ ಲಗೀ' ಎಂದು ಮೊದಲ ಪ್ರೀತಿಯ ಸಂಭ್ರಮಗಳನ್ನು ಸಂಜೆಯ ಸೊಬಗಿನೊಂದಿಗೆ ಸಮೀಕರಿಸುತ್ತದೆ. ಕನ್ನಡದ ಜನಪ್ರಿಯ ಚಿತ್ರಗೀತೆಯೊಂದು ಎದೆ ಭೇದಿಸುವ ಆರ್ತ ಕಂಠದಲ್ಲಿ ಹಾಡುತ್ತದೆ – 'ಈ ಸಂಜೆ ಯಾಕಾಗಿದೆ, ನೀನಿಲ್ಲದೆ ಈ ಸಂತೆ ಸಾಕಾಗಿದೆ, ನೀನಿಲ್ಲದೆ ಏಕಾಂತವೆ ಆಲಾಪವು, ಏಕಾಂಗಿಯ ಸಲ್ಲಾಪವು, ಈ ಮೌನ ಬಿಸಿಯಾಗಿದೆ' ಎನ್ನುತ್ತ ವಿರಹಿಯೊಬ್ಬನ ಚೀತ್ಕಾರದೊಂದಿಗೆ ಪ್ರತಿಯೊಬ್ಬರ ಎದೆಯಾಳದಲ್ಲಿ ಮಾಯದ ಗಾಯದಂತೆ ಅವಿತಿರುವ ಹಳೆಯ ಪ್ರೀತಿಯ ನೆನಪನ್ನು ಭುಗಿಲೆಬ್ಬಿಸಿ ಸಣ್ಣ ಬಿಸಿಯುಸಿರೊಂದನ್ನು ಹೊರದಬ್ಬುತ್ತದೆ. ಪ್ರೇಮನಿರತ ಯುವ ಹೃದಯಗಳಿಗೆ ಸಂಜೆಯಾಗುತ್ತಿದ್ದಂತೆ ಪಾರ್ಕು, ಗುಡ್ಡ, ಕಡಲತೀರ ಮುಂತಾದ ಸ್ಥಳಗಳಲ್ಲಿ ತಮ್ಮ ಪ್ರಾಣಪದಕಗಳನ್ನು ಭೆಟ್ಟಿಯಾಗುವ ಸಡಗರವಾದರೆ, ಭಗ್ನಪ್ರೇಮಿಗಳಿಗೆ ಎದೆ ಹೊತ್ತಿ ಧಗಧಗ ಉರಿಯುವ ಪ್ರಾಣಸಂಕಟ. 'ನಿತ್ಯೋತ್ಸವದ ಕವಿ' ಕೆ.ಎಸ್. ನಿಸಾರ್ ಅಹಮದ್, ಇದೇ ಭಾವದಿಂದಲೇ ಬರೆದಿರುವ ಪ್ರಸಿದ್ಧ ಕವಿತೆ ಹೀಗಿದೆ:

ಕಣ್ಣನೆ ತಣಿಸುವ ಈ ಪಡುವಣ ಬಾನ್ ಬಣ್ಣಗಳು
ಮಣ್ಣನೆ ಹೊನ್ನಿನ ಹಣ್ಣಾಗಿಸುವೀ ಕಿರಣಗಳು
ಹಚ್ಚನೆ ಹಸುರಿಗೆ ಹಸೆಯಿಡುತಿರುವೀ ಖಗ ಗಾನ
ಚಿನ್ನ ನೀನಿಲ್ಲದೆ ಬಿಮ್ಮನುತಿದೆ ರಮ್ಯೋದ್ಯಾನ

ರಾಷ್ಟ್ರಕವಿ ಕುವೆಂಪು ಅವರು ಕೆಂಪೇರುವ ಆಗಸದ ಕುರಿತು ವರ್ಣಲೀಲೆಯಲ್ಲಿ ನೀಲಿ ಬಾನನ್ನು ಆವರಿಸುವ ಮೇಘಮಾಲೆಯ ಕಣ್ಣುಮುಚ್ಚಾಲೆಯಾಟದ ಕುರಿತು ಸೊಗಸಾದ ಶಬ್ದಗಳೊಂದಿಗೆ ಅನೇಕ ಕವಿತೆಗಳನ್ನು ಬರೆದಿದ್ದಾರೆ. ಆದರೆ, ಜನಮನವನ್ನು ಗೆದ್ದಿರುವುದೆಂದರೆ ವಿರಹ ತೊಟ್ಟಿಕ್ಕುವ ಸಂಜೆಯ ಕವಿತೆಯೆನ್ನುವುದು ಸತ್ಯವಾಗಿರುವ ಸಂಗತಿ.

ಬೇಸರಿನ ಸಂಜೆಯಿದು ಬೇಕೆನಗೆ ನಿನ್ನ ಜೊತೆ
ಎಲ್ಲಿ ಹೋದೆಯೊ ಇನಿಯಾ ಬಾ ಬೇಗನೆ
ಮಬ್ಬು ಕವಿದಿದೆ ನಭಕೆ ಮಂಕು ಕವಿದಿದೆ ಮನಕೆ
ವಿರಹದೆದೆ ಕರೆಯುತಿದೆ ಬಾ ಬೇಗನೆ

ಅಮರತ್ವದ ದುರಾಸೆಯಿಂದ ತನಗೆ ಮರಣವು ಹಗಲೂ ಬರಬಾರದು, ಇರುಳೂ ಬರಬಾರದೆಂದು ಬ್ರಹ್ಮನಿಂದ ವರ ಪಡೆದುಕೊಂಡ ದುರುಳ ಹಿರಣ್ಯಕಶಿಪುವನ್ನು ವಧಿಸಲು ಜಾಣ ಮುರಾರಿ ಮುಸ್ಸಂಜೆಯೇ ಸೂಕ್ತ ಸಮಯವೆಂದು ಮುಗುಳ್ನಕ್ಕ. ದುರಾಸೆಯ ರಕ್ಕಸನನ್ನು ಮುಸ್ಸಂಜೆಯ ಸಮಯದಲ್ಲಿ, ಕಂಬದಿಂದ ಹೊರಬಂದು, ಮನೆಯೂ ಅಲ್ಲದ ಬಯಲೂ ಅಲ್ಲದ ಹೊಸ್ತಿಲ ಮೇಲೆ ಕುಳಿತು, ತನ್ನ ಉಗುರುಗಳಿಂದಲೇ ಕರುಳು ಬಗೆದು ಸಂಹರಿಸಿ ಬಿಡುತ್ತಾನೆ. ಹಗಲಿನ ಬೆಳಕಲ್ಲಿ ಮಾಡಲಾರದ ಕೆಲಸಗಳಿಗಾಗಿ ಕತ್ತಲನ್ನೇ ಕಾಯುವ ಜನರು ತಯಾರಾಗುವುದೇ ಸಂಜೆಯ ವೇಳೆ. ಅನೇಕ ಪಾತಕಗಳಿಗೆ ವೇದಿಕೆಯಾಗುವುದು ನಡುರಾತ್ರಿ ಕಳೆದ ನಂತರದ ಭೀಕರ ಕಾವಳವಾದರೂ, ಅದಕ್ಕೆ ಮುನ್ನುಡಿ ಬರೆಯುವುದು, ತಯಾರಿ ನಡೆಯುವುದು ಮುಸ್ಸಂಜೆಯಲ್ಲಿ. ದಿನವಿಡೀ ಹೆಬ್ಬಾವಿನಂತೆ ಬಿದ್ದುಕೊಂಡಿದ್ದವರು ಎದ್ದು ಅಂಗಿಯೇರಿಸಿಕೊಂಡು, ಹತ್ಯಾರಗಳನ್ನು ಮೈಯಲ್ಲಡಗಿಸಿ ಇಟ್ಟುಕೊಂಡು